# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ: ಹಾವೇರಿ ಜಿಲ್ಲೆ, ಬ್ಯಾಡಗಿ ತಾಲ್ಲೂಕಿನ ಗುಡ್ಡದ ಮಲ್ಲಾಪುರದ ಏತ ನೀರಾವರಿ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.**

++ ++ ++

**ಓದಲಾಗಿದೆ :-**

ಪ್ರಧಾನ ಇಂಜಿನಿಯರ್, ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು ಇವರ ಪತ್ರ ಸಂಖ್ಯೆ:ಜಸಅಸಂ/ಯೋ ಮುಪ್ರ ತ/ತಾಸ-4/ಸಇ-2/ಅಂದಾಜು/2003-04, ದಿನಾಂಕ:08-08-2003.

**ಪ್ರಸ್ತಾವನೆ :-**

ಓದಲಾದ ಪತ್ರದಲ್ಲಿ ಹಾವೇರಿ ಜಿಲ್ಲೆ, ಬ್ಯಾಡಗಿ ತಾಲ್ಲೂಕಿನ ಗುಡ್ಡದ ಮಲ್ಲಾಪುರದ ಏತ ನೀರಾವರಿ ಯೋಜನೆಯ ವಿವರವಾದ ಯೋಜನಾವರದಿಯನ್ನು ಪ್ರಧಾನ ಇಂಜಿನಿಯರ್, ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು ರವರು ರೂ.6,000 ಲಕ್ಷಗಳಿಗೆ ತಯಾರಿಸಿ ಸಲ್ಲಿಸಿರುತ್ತಾರೆ. ಸದರಿ ಯೋಜನೆಗೆ 1.00 ಟಿ.ಎಂ.ಸಿ., ನೀರನ್ನು ವರದಾ ನದಿಯಿಂದ ನೀರನೆತ್ತಿ ಬಳಸಲು ಉದ್ದೇಶಿಸಲಾಗಿದೆ. ಬ್ಯಾಡಗಿ ತಾಲ್ಲೂಕಿನ ಗುಡ್ಡದ ಮಲ್ಲಾಪುರ ಗ್ರಾಮದ ಭೂ ಪ್ರದೇಶವು ಮಳೆ ನೀರಿನ ಅಭಾವದಿಂದಾಗಿ ಪದೆ ಪದೇ ನೀರಿನ ಕೊರತೆಯನ್ನು ಅನುಭವಿಸುತ್ತಿರುತ್ತದೆ. ವರದಾ ನದಿಯಿಂದ ಕುಸನೂರ್ ಗ್ರಾಮದ ಬಳಿ ಯೋಂಕಣ ಬ್ಯಾರೇಜಿನ ಕೆಳಗಡೆಯಲ್ಲಿ ನೀರನ್ನು ಎರಡು ಹಂತಗಳಲ್ಲಿ ಸುಮಾರು 25 ಕಿ.ಮೀ.ಗಳ ದೂರಕ್ಕೆ ಸಾಗಿಸಿ ಸುಮಾರು 13,000 ಎಕರೆ ಭೂ ಪ್ರದೇಶಕ್ಕೆ ನೀರನ್ನು ಒದಗಿಸಲು ಈ ಯೋಜನೆಯಲ್ಲಿ ಉದ್ದೇಶಿಸಿದೆ. ಮೊದಲ ಬಾರಿಗೆ 2002ರಲ್ಲಿ ಯೋಜಿಸಿದ್ದ ಯೋಜನೆಯನ್ನು ವಿವರವಾದ ಅಧ್ಯಯನದ ನಂತರ ಪ್ರಸ್ತುತ ಯೋಜನೆಯಂತೆ ತಯಾರಿಸಲಾಗಿದ್ದು ಇದಕ್ಕೆ ಆಡಳಿತಾತ್ಮಕ ಅನುಮೋದನೆಯನ್ನು ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಪ್ರಧಾನ ಇಂಜಿನಿಯರ್‌ರವರು ಸಲ್ಲಿಸಿರುತ್ತಾರೆ. ಕೇಂದ್ರ ಸರ್ಕಾರದ ಕೇಂದ್ರ ಜಲ ಆಯೋಗಕ್ಕೆ ದಿನಾಂಕ:15-01-2002ರಂದು ಸಲ್ಲಿಸಲಾಗಿರುವ ಪರಿಷ್ಕೃತ ಮಾಸ್ಟರ್ ಪ್ಲಾನ್‌ನಲ್ಲಿ ಸದರಿ ಯೋಜನೆಗೆ 1.00 ಟಿ.ಎಂ.ಸಿ., ನೀರನ್ನು ಹಂಚಿಕೆ ಮಾಡಲಾಗಿರುತ್ತದೆ.

2. ಪ್ರಸ್ತಾವನೆಯನ್ನು ಸರ್ಕಾರ ಮಟ್ಟದಲ್ಲಿ ಪರಿಶೀಲಿಸಿದ್ದು, ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ: ಜಸಂಇ 25 ವಿಬ್ಯಾಇ 2002, ಬೆಂಗಳೂರು, ದಿನಾಂಕ:23-08-2003.**

ಹಾವೇರಿ ಜಿಲ್ಲೆ, ಬ್ಯಾಡಗಿ ತಾಲ್ಲೂಕಿನ ಗುಡ್ಡದ ಮಲ್ಲಾಪುರದ ಏತ ನೀರಾವರಿ ಯೋಜನೆಯ ರೂ.6,000 ಲಕ್ಷಗಳ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.

2. ಈ ಯೋಜನೆಯನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ಕರ್ನಾಟಕ ನೀರಾವರಿ ನಿಗಮ ನಿಯಮಿತದಿಂದ ಕೈಗೆತ್ತಿಕೊಳ್ಳಲು ಹಸ್ತಾಂತರಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,
23/8
(ಎಸ್.ಶ್ರೀಧರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಜಲ ಸಂಪನ್ಮೂಲ ಇಲಾಖೆ (ವಿ.ಬ್ಯಾ.ಯೋ).

ಗೆ

1) ಮಹಾಲೇಖಪಾಲರು (ಲೆಕ್ಕ ಪತ್ರ/ಲೆಕ್ಕ ಪರಿಶೋಧನೆ), ಕರ್ನಾಟಕ, ಬೆಂಗಳೂರು.
2) ಮಾನ್ಯ ಮುಖ್ಯ ಮಂತ್ರಿಗಳ ಪ್ರಧಾನ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು.
4) ಪ್ರಧಾನ ಇಂಜಿನಿಯರ್, ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.
5) ಮುಖ್ಯ ಇಂಜಿನಿಯರ್, ಕೆ.ಎನ್.ಎನ್.ಎಲ್., ನೀರಾವರಿ (ಉತ್ತರ), ಬೆಳಗಾಂ.
6) ಸರ್ಕಾರದ ಉಪ ಕಾರ್ಯದರ್ಶಿಗಳು, ಕ್ಯಾಬಿನೆಟ್ ವ್ಯವಹಾರಗಳು, ವಿಧಾನಸೌಧ, ಬೆಂಗಳೂರು.
7) ವಿಶೇಷ ಕರ್ತವ್ಯಾಧಿಕಾರಿಗಳು ಮತ್ತು ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ (ಆರ್ಥಿಕ ಕೋಶ), ಬೆಂಗಳೂರು.
8) ಹೆಚ್ಚಿನ ಪ್ರತಿ/ಬಿಡಿ ಪ್ರತಿ.

* * * * *